ಈ) ಪ್ರಸ್ತುತ ರಾಜ್ಯದಲ್ಲಿ ವಿದ್ಯುತ್ ಬೇಡಿಕೆಯು ಲಭ್ಯತೆಗಿಂತ ಅಧಿಕವಾಗಿದ್ದು, ಕೊರತೆಯನ್ನು ನೀಗಿಸಲು ಸರ್ಕಾರವು ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ. ವಿದ್ಯುತ್ ಉತ್ಪಾದನೆಯು ಹೆಚ್ಚಾದ ನಂತರ ಲಭ್ಯತೆಯನ್ನು ಆಧರಿಸಿ ಅಥಣಿ ತಾಲ್ಲೂಕಿಗೆ ಹೆಚ್ಚಿನ ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯ ಹೆದ್ದಾರಿಗಳು ಹಾಗೂ ರಾಷ್ಟ್ರೀಯ ಸುಧಾರಣೆಗೆ ಬಿಡುಗಡೆ

1891(1374); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ)

ಅ) ಬೆಳಗಾವಿ ಜಿಲ್ಲೆ ಅಥಣಿ ವಿಧಾನ ಸಭಾ ಕ್ಷೇತ್ರದಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳು ಎಷ್ಟು ಕಿಮೀ. ವ್ಯಾಪ್ತಿ ಹೊಂದಿದೆ;. ಅವು ಯಾವುವು (ವಿವರ ನೀಡುವುದು).

ಆ) ಕಳೆದ 2 ವರ್ಷಗಳಿಂದ ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಸುಧಾರಣೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? (ವರ್ಷವಾರು ಸಂಪೂರ್ಣ ವಿವರ ನೀಡುವುದು)

ಇ) ಸದರಿ ರಸ್ತೆಗಳ ಸುಧಾರಣೆಗಾಗಿ ಬಿಡುಗಡೆಯಾದ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆಯೇ? (ವಿವರ ನೀಡುವುದು).

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಬೆಳಗಾವಿ ಜಿಲ್ಲೆಯ ಅಥಣಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಇರುವುದಿಲ್ಲ. ಆದರೆ 119.66 ಕಿಮೀ. ಉದ್ದದ ಮೂರು ರಾಜ್ಯ ಹೆದ್ದಾರಿಗಳಿರುತ್ತವೆ. ಅವುಗಳ ವಿವರ ಈ ಕೆಳಕಂಡಂತಿದೆ:

ಕ್ರ.ಸಂ.	ರಾಜ್ಯ ಹೆದ್ದಾರಿ ವಿವರ	ಉದ್ದ (ಕಿಮೀ.ಗಳಲ್ಲಿ)
1	ರಾಜ್ಯ ಹೆದ್ದಾರಿ–12 ವಿಜಯಪುರ ಸಂಕೇಶ್ವರ	48.20
2	ರಾಜ್ಯ ಹೆದ್ದಾರಿ–31 ಜತ್–ಜಾಂಬೋಟಿ	25.00
3	ರಾಜ್ಯ ಹೆದ್ದಾರಿ 72 ನಿಪ್ಪಾಣಿ–ಕೊಟ್ಟಲಗಿ ರಸ್ತೆ (ರಾಜ್ಯ ಗಡಿಯವರೆಗೆ)	46.46
	ಒಟ್ಟು	**119.66**

ಆ) 2012–13 ಹಾಗೂ 2013–14ನೇ ಸಾಲುಗಳಲ್ಲಿ ಅಥಣಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳ ರಸ್ತೆಗಳ ಸುಧಾರಣೆಗೆ ಬಿಡುಗಡೆ ಮಾಡಿರುವ ಹಣದ ವಿವರ ಈ ಕೆಳಕಂಡಂತಿದೆ:

(₹ ಲಕ್ಷಗಳಲ್ಲಿ)

ಕ್ರ.ಸಂ.	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಹಣ	
		2012–13	2013–14
1	5054–ರಾಜ್ಯ ಹೆದ್ದಾರಿ ಸುಧಾರಣೆ	55.00	368.51
2	5054–ರಾಜ್ಯ ಹೆದ್ದಾರಿ ನವೀಕರಣ	129.61	75.13
3	3054–13ನೇ ಹಣಕಾಸು ಆಯೋಗ	79.00	87.78
	ಒಟ್ಟು:	**263.61**	**531.42**

ಇ) ರಾಜ್ಯ ಹೆದ್ದಾರಿ ರಸ್ತೆಗಳ ಸುಧಾರಣೆಗಾಗಿ ಬಿಡುಗಡೆಯಾದ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ.

ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನ

1375(1892); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ)

ಅ) ಬೆಳಗಾವಿ ಜಿಲ್ಲೆ ಅಥಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪುರಸಭೆಗೆ 2012–13 ಹಾಗೂ 2013–14ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು;

ಆ) ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ; (ಯೋಜನೆಗಳವಾರು, ವಾರ್ಡ್‌ಗಳವಾರು ವರ್ಷವಾರು ಹಾಗೂ ಕಾಮಗಾರಿಗಳವಾರು ವಿವರ ನೀಡುವುದು);

ಇ) ಅಥಣಿ ವಿಧಾನಸಭಾ ಕ್ಷೇತ್ರದ ಪುರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;